(ಈ) ಜಿಲ್ಲಾ ಸಹಕಾರಿ ಬ್ಯಾಂಕಿನಿಂದ ಎರವಲು ಪಡೆದು ಒಬ್ಬ ಮ್ಯಾನೇಜರ್ ಮತ್ತು ಕೇಂದ್ರ ಸಹಕಾರೀ ಬ್ಯಾಂಕ್ ಹಾಗೂ ಸರಕಾರದ ಪರ, ಒಬ್ಬೊಬ್ಬ ಪ್ರತಿನಿಧಿಗಳು ಕಾರ್ಯಕಾರೀ ಮಂಡಲಿಯಲ್ಲಿ ನೇಮಕಗೊಂಡಿರುತ್ತಾರೆ ಹಾಗೂ ಸಂಘದ ಲೆಕ್ಕವನ್ನು ನಿಯಮಿತ ಕಾರ್ಯಕ್ರಮದ ಪ್ರಕಾರ ಆಡಿಟ್ ನಡೆಯಲು ಕಾರ್ಯಕ್ರಮ ಇಟ್ಟಿರುತ್ತೆ :

ಅಕ್ರಮ ದಾಸ್ತಾನು ಸಂಗ್ರಹಣೆ ಪತ್ತೆ

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್ (ಶಿರ್ಸಿ).—

11. (18) ಆಹಾರ ಹಾಗೂ ನಿತ್ಯೋಪಯೋಗಿ ಸರಬರಾಜು ರಾಜ್ಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೇ.—

(ಅ) ಕಳೆದ ಒಂದು ವರ್ಷದಿಂದ ಅಗತ್ಯವಸ್ತು ಕಾಯಿದೇ ಉಲ್ಲಂಘಿಸಿ ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಯಾವ ಯಾವ ವರ್ತಕರು ಎಷ್ಟೆಷ್ಟು ಧಾನ್ಯಗಳನ್ನು (ಭತ್ತ, ಅಕ್ಕಿ, ರಾಗಿ, ಜೋಳ, ಸಕ್ಕರೆ ಮತ್ತು ಸೀಮೆಎಣ್ಣೆ) ಅಕ್ರಮವಾಗಿ ಶೇಖರಿಸಿಟ್ಟಿದ್ದರು ;

(ಆ) ಈ ರೀತಿ ಅಕ್ರಮವಾಗಿ ಶೇಖರಿಸಿಟ್ಟಿದ್ದ ಅಗತ್ಯ ದಾಸ್ತಾನುಗಳು ಪತ್ತೆ ಹಚ್ಚಿ ಪೋಲೀಸರು ವಶಪಡಿಸಿಕೊಂಡ ದಾಸ್ತಾನುಗಳ ಪ್ರಮಾಣವೆಷ್ಟು ;

(ಇ) ಈ ರೀತಿ ಅಕ್ರಮವಾಗಿ ಶೇಖರಿಸಿಟ್ಟಿದ್ದ ವರ್ತಕರುಗಳ ಮೇಲೆ ಪೋಲೀಸಿನವರು ಹೂಡಿರುವ ಮೊಕದ್ದಮೆಗಳೆಷ್ಟು ;

(ಈ) ಯಾವ ಯಾವ ಮೊಕದ್ದಮೆಗಳಲ್ಲಿ ಯಾವ ಯಾವ ವರ್ತಕರಿಗೆ ಯಾವ ಯಾವ ರೀತಿಯ ಶಿಕ್ಷೆ ಕೊಡಲಾಗಿದೆ?

ಆಹಾರ ಹಾಗೂ ನಿತ್ಯೋಪಯೋಗಿ ಸರಬರಾಜು ರಾಜ್ಯ ಮಂತ್ರಿಗಳು (ಶ್ರೀಮತಿ ಇವಾವಾಜ್).—

ಉತ್ತರ.—(ಅ) (ಆ) ವಿವರಗಳಿಗೆ ಲಗತ್ತಿಸಿರುವ ಪಟ್ಟಿಯನ್ನು ವಿಧಾನಸಭೆಯ ಗ್ರಂಥಾಲಯದಲ್ಲಿಡಲಾಗಿದೆ.

(ಇ) 928 ಮೊಕದ್ದಮೆಗಳು.

(ಈ) ವಿವರಗಳಿಗೆ ಲಗತ್ತಿಸಿರುವ ಪಟ್ಟಿಯನ್ನು ವಿಧಾನಸಭೆಯ ಗ್ರಂಥಾಲಯದಲ್ಲಿಡಲಾಗಿದೆ.

ಪ್ರಾಥಮಿಕ ಕಡ್ಡಾಯ ಶಿಕ್ಷಣ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್ (ಶಿರ್ಸಿ) :—

12. (20).—ಮಾನ್ಯ ವಿದ್ಯಾಮಂತ್ರಿಗಳು ಈ ಕೆಳಕಂಡ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ರಾಜ್ಯದಲ್ಲಿ ಪ್ರಾಥಮಿಕ ಕಡ್ಡಾಯ ಶಿಕ್ಷಣ ಕಾಯಿದೆ ಅನುಸರಿಸಿ 1971–72ನೆಯ ಸಾಲಿನಲ್ಲಿ ಶಾಲೆಗೆ ಸೇರಲು ಅರ್ಹತೆ ಪಡೆದಿರುವ ವಯಸ್ಸಿನ ಹೆಣ್ಣು ಮತ್ತು ಗಂಡು ಮಕ್ಕಳೆಷ್ಟು

(ಆ) ಈ ರೀತಿ ಶೇಖರಿಸಿದ ಅಂಕಿ ಸಂಖ್ಯೆಗಳಲ್ಲಿ ಶಾಲೆಗೆ ದಾಖಲಾದ ಮಕ್ಕಳೆಷ್ಟು ಶಾಲೆಗೆ ಸೇರದೆ ಬಿಟ್ಟುಹೋದ ಮಕ್ಕಳೆಷ್ಟು :

(ಇ) ಈ ರೀತಿ ಶೇಖರಿಸಿದ ಅಂಕಿ ಅಂಶಗಳಲ್ಲಿ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗ (ಷೆಡ್ಯೂಲ್ಕ್ಯಾಸ್ಟ್ ಅಂಡ್ ಷೆಡ್ಯೂಲ್ ಟ್ರೈಬ್ಸ್) ಕ್ಕೆ ಸೇರಿದ ಮಕ್ಕಳೆಷ್ಟು : ಇವರಲ್ಲಿ ಶಾಲೆಗೆ ಸೇರಿಸಲ್ಪಟ್ಟ ಮಕ್ಕಳೆಷ್ಟು : ಮತ್ತು ಶಾಲೆಗೆ ಸೇರಿಸಲ್ಪಡದಿದ್ದ ಮಕ್ಕಳೆಷ್ಟು :

(ಈ) ಪ್ರತಿ ಮಕ್ಕಳೂ ಶಾಲೆಗೆ ಸೇರಿಸಲ್ಪಡಲು ಇಲಾಖಾಧಿಕಾರಿಗಳು ಮಾಡಿರುವ ಏರ್ಪಾಡುಗಳಾವುವು ?

ವಿದ್ಯಾಮಂತ್ರಿಗಳು (ಶ್ರೀ ಎ. ಆರ್. ಬದರೀನಾರಾಯಣ).—

(ಅ)	ಗಂಡುಮಕ್ಕಳು	ಹೆಣ್ಣುಮಕ್ಕಳು	ಒಟ್ಟು
	18·6·5688	14·57,220	33·13·908

(ಆ)

ದಾಖಲಾದವರು	17·16·095	13·20·007	30·36,102
ದಾಖಲಾಗದವರು	1·40,593	1·37,213,	2·77·806

(ಇ) ಮಕ್ಕಳ ಗಣತಿಯ ಪ್ರಕಾರ 1971ರ ಮೇ 22ನೇ ದಿನಾಂಕದಂದು ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗಕ್ಕೆ ಸೇರಿದ ಮಕ್ಕಳು ಮತ್ತು ಇವರಲ್ಲಿ 22-5-71ರಲ್ಲಿ ಓದುತ್ತಿರುವ ಮಕ್ಕಳ ಸಂಖ್ಯೆ ಈ ರೀತಿ ಇದೆ .—

(1) ಪರಿಶಿಷ್ಟ ವರ್ಗದ ಒಟ್ಟು ಮಕ್ಕಳು.

ಗಂಡು 9.3.12.735 ಹೆಣ್ಣು 2·25·886

ತಾ. 22–5–71ರಲ್ಲಿ ಓದುತ್ತಿದ್ದ ಮಕ್ಕಳು

ಗಂಡು 1,95,739 ಹೆಣ್ಣು 1,34,684

ಶಾಲೆಗೆ 22–5–71ರ ಮೇಲೆ ಸೇರಿಸಲ್ಪಡಬೇಕಾದ ಮಕ್ಕಳು

ಗಂಡು 1,16·996 ಹೆಣ್ಣು 91,182

(2) ಪರಿಶಿಷ್ಟ ಜನಾಂಗದ ಒಟ್ಟು ಮಕ್ಕಳು.

ಗಂಡು. 341,50 ಹೆಣ್ಣು 26,571

ತಾ. 22–5–71 ರಲ್ಲಿ ಓದುತ್ತಿದ್ದ ಮಕ್ಕಳು.

ಗಂಡು 16·218 ಹೆಣ್ಣು 11,663

ಶಾಲೆಗೆ ತಾ : 22–5–71 ರ ಮೇಲೆ ಸೇರಿಸಲ್ಪಡಬೇಕಾದ ಮಕ್ಕಳು.

ಗಂಡು 17,932 ಹೆಣ್ಣು 14,908

(ಈ) ಸ್ಥಳೀಯ ಶಾಲಾಭಿವೃದ್ಧಿ ಸಮಿತಿಗಳ ಸದಸ್ಯರ ಮುಖಾಂತರ ಇಲಾಖೆಯ ಮಕ್ಕಳ ಹಾಜರಾತಿಯನ್ನು ಹೆಚ್ಚಿನ ಕ್ರಮದಲ್ಲಿ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದೆ.